**ದಿನಾಂಕ: 03–04–2012 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| ಶ್ರೀಯುತರಾದ :– | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 2. | ಕಾರ್ಯಪಾಲಕ ಅಭಿಯಂತರರು(ಪರಿಸರ ಕೋಶ–ಕೆರೆಗಳು) |
| 3 | ಹೆಚ್.ಎನ್.ಗಂಗಾಧರ್ | ಸದಸ್ಯರು | 2 | ಕಾರ್ಯಪಾಲಕ ಅಭಿಯಂತರರು /ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ–ಪೂರ್ವ/ಪಶ್ಚಿಮ / ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| 4 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | | |
| 5 | ಎಮ್.ಶಿವರಾಜು | ಸದಸ್ಯರು | | |
| 6 | ಕೆ.ದೊಡ್ಡಣ್ಣ | ಸದಸ್ಯರು | | |
| 7 | ಎಸ್.ವಿಜಯನ್ | ಸದಸ್ಯರು | 3 | ತೋಟಗಾರಿಕೆ ಅಧೀಕ್ಷಕರು(ಪೂರ್ವ/ಪಶ್ಚಿಮ/ದಕ್ಷಿಣ/ರಾ.ರಾ.ನಗರ/ ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ ಮಹದೇವಪುರ) ವಲಯ |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, 2011–12ನೇ ಸಾಲಿನ ಆಯವ್ಯಯದಲ್ಲಿ, ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಸಂಬಂಧಪಟ್ಟಂತೆ ಕಾರ್ಯಕ್ರಮ (ಪಿ.ಓ.ಡಬ್ಲ್ಯೂ) *ಪಟ್ಟಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.*

ನಂತರ, ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. **ವಿಷಯ ಸಂಖ್ಯೆ:ತೋ/ಸ್ಥಾ/ಸ/78/ 11–12, ದಿನಾಂಕ: 30–03–2012**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, 2011–12ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ತೋಟಗಾರಿಕೆ ವಿಭಾಗಕ್ಕೆ ನಿಗಧಿಪಡಿಸಿರುವ ಅನುದಾನದಲ್ಲಿ ರೂ.2749.00 ಲಕ್ಷಗಳಿಗೆ ಈ ಕೆಳಕಂಡ ಶೀರ್ಷಿಕೆಗಳಡಿ ಪಿ.ಓ.ಡಬ್ಲ್ಯೂ. ಕಾರ್ಯಕ್ರಮಗಳನ್ನು ಸಿದ್ದಪಡಿಸಲಾಗಿದೆ.

| ಕ್ರ. ಸಂ. | ಶೀರ್ಷಿಕೆವಾರು ಕಾರ್ಯಕ್ರಮಗಳು | ಲೆಕ್ಕಶೀರ್ಷಿಕೆ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1. | ಬೋರ್‌ವೆಲ್‌ಗಳ ನಿರ್ವಹಣೆ | P0299 | 200.00 |
| 2. | ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ | P0088 | 1499.00 |
| 3. | ವೃಕ್ಷವನಗಳು | P1850 | 1000.00 |
| 4. | ಸ್ವಾತಂತ್ರ್ಯ ಉದ್ಯಾನವನ (ನಿರ್ವಹಣೆ) | P1887 | 50.00 |
| | **ಒಟ್ಟು** | | **2749.00** |

ಮುಂದುವರೆದಿದೆ. . . .  .

ತೋಟಗಾರಿಕೆ ವಿಭಾಗಕ್ಕೆ ನಿಗಧಿಪಡಿಸಿರುವ **ರೂ.2749.00** ಲಕ್ಷಗಳಿಗೆ ವಲಯವಾರು ಹಂಚಿಕೆ ಮಾಡಿರುವ ವಿವರಗಳು ಈ ಕೆಳಕಂಡಂತಿವೆ.

| **ಕ್ರ.ಸಂ.** | **ವಲಯಗಳು** | **ಕಾಮಗಾರಿಗಳ ಸಂಖ್ಯೆ** | **ಮೊತ್ತ (ರೂ.ಲಕ್ಷಗಳಲ್ಲಿ)** |
|---|---|---|---|
| 1. | ಪೂರ್ವ | 159 | 437.00 |
| 2. | ಪಶ್ಚಿಮ | 276 | 487.00 |
| 3. | ದಕ್ಷಿಣ–1 | 126 | 321.95 |
| 4. | ದಕ್ಷಿಣ–2 | 153 | 368.80 |
| 5. | ಮಹದೇವಪುರ | 64 | 180.98 |
| 6. | ಯಲಹಂಕ | 67 | 307.00 |
| 7. | ದಾಸರಹಳ್ಳಿ | 32 | 98.00 |
| 8. | ರಾಜರಾಜೇಶ್ವರಿ ನಗರ | 103 | 336.10 |
| 9. | ಬೊಮ್ಮನಹಳ್ಳಿ | 101 | 212.17 |
| **ಒಟ್ಟು** | | **1081** | **2749.00** |

ತೋಟಗಾರಿಕೆ ವಿಭಾಗಕ್ಕೆ ನಿಗಧಿಪಡಿಸಿರುವ ಅನುದಾನದಲ್ಲಿ **ರೂ.2749.00 ಲಕ್ಷ**ಗಳಿಗೆ, 1081 ಕಾಮಗಾರಿಗಳಿಗೆ ವಲಯವಾರು ಪಿ.ಓ.ಡಬ್ಲ್ಯೂ. ಕಾರ್ಯಕ್ರಮಗಳನ್ನು ಸಿದ್ಧಪಡಿಸಿ, ಈ ಟಿಪ್ಪಣಿ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಕಾರ್ಯಕ್ರಮಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 29–03–2012 ರ ಟಿಪ್ಪಣಿ.

<u>ನಿರ್ಣಯ:–</u> **ದಿನಾಂಕ: 29–03–2012 ಮಾನ್ಯ ವಿಶೇಷ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದು ಹಾಗೂ ಪಾಲಿಕೆಯಲ್ಲಿ ಬರುವ 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಅತ್ಯಗತ್ಯ, ಅವಶ್ಯಕತೆಯಿರುವುದರಿಂದ, 2011–12ನೇ ಸಾಲಿನ ಆಯವ್ಯಯದಲ್ಲಿ ಜಾಬ್‌ಕೋಡ್ ನೀಡಿ ಹಾಗೂ ಬೋರ್‌ವೆಲ್ ನಿರ್ವಹಣೆಗೆ ಸಂಬಂಧಪಟ್ಟ ಕಾಮಗಾರಿಗಳು ತುರ್ತು ಕಾಮಗಾರಿಗಳಾಗಿರುವುದರಿಂದ, ಇವುಗಳನ್ನು ಮಾತ್ರ ಕೆ.ಆರ್.ಐ.ಡಿ.ಎಲ್. ಮುಖೇನ ನಿರ್ವಹಿಸಲು ಸಮಿತಿಯು ತೀರ್ಮಾನಿಸಲು ಹಾಗೂ ಉಳಿಕೆ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯಲು ಸಮಿತಿಯು ತೀರ್ಮಾನಿಸಿತು ಹಾಗೂ ಮಾನ್ಯ ಆಯುಕ್ತರು ದಿನಾಂಕ: 24–03–2012ರ ಸುತ್ತೋಲೆಯಲ್ಲಿ 2011–12ನೇ ಸಾಲಿನ ಆಯವ್ಯಯ ಪ್ರಕ್ರಿಯೆಯ ಜಾಬ್‌ಕೋಡ್‌ನ್ನು ದಿನಾಂಕ:31–03–2012ರ ಅಂತ್ಯಕ್ಕೆ ಸ್ಥಗಿತಗೊಳಿಸಲು ಸೂಚಿಸಿರುತ್ತಾರೆ. ಆದರೆ, ಸಮಿತಿಗೆ ನಿರ್ವಹಣೆಗೆ ಸಂಬಂಧಪಟ್ಟ ಕಾರ್ಯಕ್ರಮ ಪಟ್ಟಿ (ಪಿ.ಓ.ಡಬ್ಲ್ಯೂ 2011–12) ದಿನಾಂಕ: 30–3–2012ರಂದು ಸಮಿತಿಯ ಅನುಮೋದನೆಗೆ ಮಂಡಿಸಿರುವ ಕಾರಣ, ಸಮಿತಿಯು ಚರ್ಚಿಸಿ ದಿನಾಂಕ:03–04–2012ಕ್ಕೆ ಅನುಮೋದನೆ ನೀಡಿರುತ್ತದೆ. ಆದ್ದರಿಂದ, ಈ ಪಿ.ಓ.ಡಬ್ಲ್ಯೂ ಕಾರ್ಯಕ್ರಮದ ಪಟ್ಟಿಗೆ ಮಾನ್ಯ ಆಯುಕ್ತರು ದಿನಾಂಕ:24–03–2012ರ ಸುತ್ತೋಲೆಯ ಆದೇಶವನ್ನು ಸಡಿಲಗೊಳಿಸಿ, ಸಮಿತಿಯು ತೆಗೆದುಕೊಂಡಿರುವ ತೀರ್ಮಾನಕ್ಕೆ ಜಾಬ್‌ಕೋಡ್ ನೀಡಲು ತೀರ್ಮಾನಿಸಿತು.**

ಮುಂದುವರೆದಿದೆ. . . . .

## 2. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/79/ 11-12, ದಿನಾಂಕ: 30-03-2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ, ಕೂಡ್ಲು ಚಿಕ್ಕೆರೆ ವಿಸ್ತೀರ್ಣ 13 ಎಕರೆ 2 ಗುಂಟೆಗಳಾಗಿದ್ದು, ಸದರಿ ಕೆರೆಯಲ್ಲಿ ಮಳೆನೀರು ಸಂಗ್ರಹಣೆ ಮಾಡುವ ಸಲುವಾಗಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸಲು ಆಯೋಜಿಸಲಾಗಿರುತ್ತದೆ. ಮೊದಲನೆ ಹಂತದಲ್ಲಿ ಕೆರೆಯಲ್ಲಿನ ಅನಧಿಕೃತ ಒತ್ತುವರಿಯನ್ನು ತೆಗೆದು ಕೆರೆಯ ಗಡಿ ಪ್ರದೇಶಕ್ಕೆ ಚೈನ್ ಲಿಂಕ್ ತಂತಿಬೇಲಿ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಸ್ಥಳೀಯ ಪಾಲಿಕೆ ಸದಸ್ಯರು, ಕೂಡ್ಲು ಚಿಕ್ಕೆರೆಯನ್ನು ಸ್ಥಳೀಯರು ಉಪಯೋಗಿಸಲು ಅನುಕೂಲವಾಗುವಂತೆ ಅಭಿವೃದ್ಧಿಪಡಿಸಲು ಕೋರಿರುತ್ತಾರೆ. ಕೆರೆಗೆ ಕೊಳಚೆ ನೀರು ಮತ್ತು ತ್ಯಾಜ್ಯ ವಸ್ತುಗಳು ಸೇರುವುದನ್ನು ತಡೆಯಲು ಮತ್ತು ಪ್ರಸಕ್ತ ಸಾಲಿನಲ್ಲಿ ಮಳೆನೀರು ಸಂಗ್ರಹಣೆ ಮಾಡುವ ಕೆಲಸಗಳಿಗೆ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.195.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ವರದಿಯಲ್ಲಿ ಕೆರೆಯ ಒಳಹರಿವು ಪ್ರಮಾಣ, ನೀರು ಸಂಗ್ರಹಣೆ, ಮೇಲಿನ ರಾಜಕಾಲುವೆಗಳ ದುರಸ್ಥಿ, ಹೂಳಿನ ಆಳ ಮತ್ತು ಪ್ರಮಾಣ ಹಾಗೂ ಕೋಡಿ ದುರಸ್ಥಿ ಮುಂತಾದ ಅಂಶಗಳು ಸೇರಿರುತ್ತವೆ.

ಆದುದರಿಂದ, ಕೂಡ್ಲು ಚಿಕ್ಕೆರೆಯಲ್ಲಿ ಮಳೆನೀರು ಸಂಗ್ರಹಣೆ ಮಾಡಿ ಅಭಿವೃದ್ಧಿಪಡಿಸಲು ತಗಲುವ ವೆಚ್ಚ **ರೂ.195.00** ಲಕ್ಷಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಟೆಂಡರ್ ಕರೆಯಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 29-03-2012 ರ ಟಿಪ್ಪಣಿ.

**ನಿರ್ಣಯ:- ತಾ: 29-03-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## 3. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/80/ 11-12, ದಿನಾಂಕ: 30-03-2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ, ದೇವಸಂದ್ರ ಕೆರೆಯ ವಿಸ್ತೀರ್ಣ 16 ಎಕರೆ 8 ಗುಂಟೆಗಳಾಗಿದ್ದು, ಸದರಿ ಕೆರೆಯಲ್ಲಿ ಮಳೆನೀರು ಸಂಗ್ರಹಣೆ ಮಾಡುವ ಸಲುವಾಗಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸಲು ಆಯೋಜಿಸಲಾಗಿರುತ್ತದೆ. ಮೊದಲನೆ ಹಂತದಲ್ಲಿ ಕೆರೆಯಲ್ಲಿನ ಅನಧಿಕೃತ ಒತ್ತುವರಿಯನ್ನು ತೆಗೆದು ಕೆರೆಯ ಗಡಿ ಪ್ರದೇಶಕ್ಕೆ ಚೈನ್ ಲಿಂಕ್ ತಂತಿಬೇಲಿ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಸ್ಥಳೀಯ ಪಾಲಿಕೆ ಸದಸ್ಯರು, ದೇವಸಂದ್ರ ಕೆರೆಯನ್ನು ಸ್ಥಳೀಯರು ಉಪಯೋಗಿಸಲು ಅನುಕೂಲವಾಗುವಂತೆ ಅಭಿವೃದ್ಧಿಪಡಿಸಲು ಕೋರಿರುತ್ತಾರೆ. ಕೆರೆಗೆ ಕೊಳಚೆ ನೀರು ಮತ್ತು ತ್ಯಾಜ್ಯ ವಸ್ತುಗಳು ಸೇರುವುದನ್ನು ತಡೆಯಲು ಮತ್ತು ಪ್ರಸಕ್ತ ಸಾಲಿನಲ್ಲಿ ಮಳೆನೀರು ಸಂಗ್ರಹಣೆ ಮಾಡುವ ಕೆಲಸಗಳಿಗೆ ಸಮಗ್ರ ಅಭಿವೃದ್ಧಿ ಯೋಜನಾ ವರದಿಯನ್ನು ತಯಾರಿಸಲು M/S. Ides Consulting Pvt. Ltd., ರವರನ್ನು ನೇಮಿಸಲಾಗಿದ್ದ ಮೇರೆಗೆ ಸದರಿಯವರು ಕೆರೆಯ ಸಮಗ್ರ ಅಭಿವೃದ್ಧಿಗೆ ವಿವರವಾದ ಯೋಜನಾ ವರದಿಯನ್ನು ರೂ.234.25 ಲಕ್ಷಗಳಿಗೆ ತಯಾರಿಸಿದ್ದು, ಸದರಿ ವರದಿಯಲ್ಲಿ ಕೆರೆಯ ಒಳಹರಿವು ಪ್ರಮಾಣ, ನೀರು ಸಂಗ್ರಹಣೆ, ಮೇಲಿನ ರಾಜಕಾಲುವೆಗಳ ದುರಸ್ಥಿ, ಹೂಳಿನ ಆಳ ಮತ್ತು ಪ್ರಮಾಣ ಹಾಗೂ ಕೋಡಿ ದುರಸ್ಥಿ ಮುಂತಾದ ಅಂಶಗಳು ಸೇರಿರುತ್ತವೆ.

**ಮುಂದುವರೆದಿದೆ. . . . .**

ಆದುದರಿಂದ, ದೇವಸಂದ್ರ ಕೆರೆಯಲ್ಲಿ ಮಳೆನೀರು ಸಂಗ್ರಹಣೆ ಮಾಡಿ ಅಭಿವೃದ್ಧಿ ಪಡಿಸಲು ತಗಲುವ ವೆಚ್ಚ **ರೂ.234.25** ಲಕ್ಷಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಟೆಂಡರ್ ಕರೆಯಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 29-03-2012 ರ ಟಿಪ್ಪಣಿ.

**ನಿರ್ಣಯ:- ದಿನಾಂಕ: 29-03-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳ ಬಗ್ಗೆ ಕ್ರಮವಹಿಸಿ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :-

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ)ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಬಿಯಂತರರು(ಕೆರೆಗಳು-ಪರಿಸರ ಕೋಶ)ರವರಿಗೆ ಕಳುಹಿಸಿದೆ.
- ತೋಟಗಾರಿಕೆ ಅಧೀಕ್ಷಕರು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ.

**ದಿನಾಂಕ: 17–04–2012 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಕುರಿತು ನಡೆದ ಸಭೆಯ ನಡವಳಿಗಳು**

---

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರಾದ :– | | |
| 1) ರ.ಆಂಜನಪ್ಪ | ಅಧ್ಯಕ್ಷರು | 1) ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2) **ಎನ್.ಎಂ.ಕೃಷ್ಣಮೂರ್ತಿ** | ಸದಸ್ಯರು | 2) ತೋಟಗಾರಿಕೆ ಅಧೀಕ್ಷಕರು **(ಪೂರ್ವ ಮತ್ತು ದಕ್ಷಿಣ)** |
| 3) ಬಿ.ಆರ್.ಚಂದ್ರಶೇಖರ್ | ಸದಸ್ಯರು | 3) ಕಾರ್ಯಪಾಲಕ ಅಭಿಯಂತರರು(ಯೋಜನೆ–ಪಶ್ಚಿಮ) |
| 4) **ಹೆಚ್.ಎನ್.ಗಂಗಾಧರ್** | ಸದಸ್ಯರು | |
| 5) ಎನ್.ಶಕುಂತಲ | ಸದಸ್ಯರು | |
| 6) ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | |
| 7) ಎಮ್.ಶಿವರಾಜ್ | ಸದಸ್ಯರು | |
| 8) ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | |
| 9) ಕೆ.ದೊಡ್ಡಣ್ಣ | ಸದಸ್ಯರು | |
| 10) **ಅಶ್ವಥ್‌ನಾರಾಯಣ್.ಜಿ.ಎ.** | ಸದಸ್ಯರು | |
| 11) **ಎಸ್.ವಿಜಯನ್** | ಸದಸ್ಯರು | |

---

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ನಂತರ, ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. ವಿಷಯ ಸಂಖ್ಯೆ:ತೋ/ಸ್ಥಾ/ಸ/01/12–13, ದಿನಾಂಕ: 16–04–2012

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ, ವಾರ್ಡ್ ಸಂಖ್ಯೆ.73, ಕೊಟ್ಟಿಗೆಪಾಳ್ಯ ವ್ಯಾಪ್ತಿಯ, ಪ್ರೇಮನಗರ ಮತ್ತು ಬಂಡೆಮಾರಮ್ಮ (ಬಸ್ ನಿಲ್ದಾಣ) ಹತ್ತಿರದ ಉದ್ಯಾನವನಗಳ ಆಸ್ತಿ ಸಂರಕ್ಷಿಸುವ ಕಾಮಗಾರಿ ನಿರ್ವಹಿಸಲು ಅಂದಾಜು ಮೊತ್ತ ರೂ.58.75 ಲಕ್ಷಗಳಿಗೆ ಪಿ–0290 BBMP Assets – Fencing and Vacant **BBMP** Land (including Parks, playgrounds and gardens) ಲೆಕ್ಕಶೀರ್ಷಿಕೆ ಅನುದಾನದಡಿಯಲ್ಲಿ 073–12–000046 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

ವಿಶೇಷ ಆಯುಕ್ತರು(ಯೋಜನೆ)ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.58.75 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಪಿ–0290 ಅಡಿಯಲ್ಲಿ

**ಮುಂದುವರೆದಿದೆ. . . . . .**

ಮಂಜೂರಾಗಿರುವುದರಿಂದ, ಸದರಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 05-04-2012 ರ ಟಿಪ್ಪಣಿ.

**ನಿರ್ಣಯ:-** **ದಿನಾಂಕ: 05-04-2012 ರ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯು ತುರ್ತಾಗಿ ಆಗಬೇಕಾಗಿರುವುದರಿಂದ, ಟೆಂಡರ್ ಕರೆದು ಕಾಮಗಾರಿಯನ್ನು ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ, ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

2. **ವಿಷಯದ ಸಂಖ್ಯೆ:ತೋ/ಸ್ಥಾ/ಸ/02/12-13, ದಿನಾಂಕ: 16-04-2012**

ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ.177ರ ಈ ಕೆಳಕಂಡ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಪಿ-2236 ಪುಟ ಸಂಖ್ಯೆ.65 ರಲ್ಲಿ, 2011-12ನೇ ಸಾಲಿನ ಜಯನಗರದ ಎ, ಬಿ, ಸಿ, ಡಿ, ಉದ್ಯಾನವನಗಳ ಅಭಿವೃದ್ಧಿ ಪಡಿಸುವುದು ಅನುದಾನದಡಿಯಲ್ಲಿ ಜಾಬ್ ಕೋಡ್ ನೀಡಲು ಕೋರಲಾಗಿದೆ.

| Sl. No. | Name of the Work | Estimate Cost Rs.in Lakhs |
|---|---|---|
| 01 | Improvements to ‘c’ Park at J.P.Nagar, IInd Phase in Ward No.177 | 10.30 |

ಈ ಮೇಲ್ಕಂಡ ಕಾಮಗಾರಿಗೆ ಜಯನಗರದ ಎ, ಬಿ, ಸಿ, ಡಿ, ಉದ್ಯಾನವನಗಳ ಅಭಿವೃದ್ಧಿ ಪಡಿಸುವುದು ಅನುದಾನದ ಶೀರ್ಷಿಕೆ ಪಿ-2236, ಪುಟ ಸಂಖ್ಯೆ.65 ರಲ್ಲಿ ಮೀಸಲಿಟ್ಟಿರುವ ರೂ.50.00 ಲಕ್ಷಗಳ ಅನುದಾನದಿಂದ ಅಂದಾಜು ಮೊತ್ತ ರೂ.10.30 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಜಾಬ್‌ಕೋಡ್ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಅಪರ ಆಯುಕ್ತರು(ಯೋಜನೆ) ರವರ ದಿನಾಂಕ:31-03-2012 ರ ಟಿಪ್ಪಣಿ.

**ನಿರ್ಣಯ:-** **ದಿನಾಂಕ:31-03-2012 ರ ಮಾನ್ಯ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

3. **ವಿಷಯದ ಸಂಖ್ಯೆ:ತೋ/ಸ್ಥಾ/ಸ/02/ 12-13, ದಿನಾಂಕ:16-04-2012**

ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ.177ರ ಈ ಕೆಳಕಂಡ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಪಿ-2236 ಪುಟ ಸಂಖ್ಯೆ.65 ರಲ್ಲಿ, 2011-12ನೇ ಸಾಲಿನ ಜಯನಗರದ ಎ, ಬಿ, ಸಿ, ಡಿ, ಉದ್ಯಾನವನಗಳ ಅಭಿವೃದ್ಧಿ ಪಡಿಸುವುದು ಅನುದಾನದಡಿಯಲ್ಲಿ ಜಾಬ್ ಕೋಡ್ ನೀಡಲು ಕೋರಲಾಗಿದೆ.

| Sl.No. | Name of the Work | Estimate Cost Rs.in Lakhs |
|---|---|---|
| 01 | Improvements to ‘A’ Park at J.P.Nagar, IInd Phase in Ward No.177 | 24.90 |

**ಮುಂದುವರೆದಿದೆ. . . . .**

ಈ ಮೇಲ್ಕಂಡ ಕಾಮಗಾರಿಗೆ ಜಯನಗರದ ಎ, ಬಿ, ಸಿ, ಡಿ, ಉದ್ಯಾನವನಗಳ ಅಭಿವೃದ್ಧಿ ಪಡಿಸುವುದು ಅನುದಾನದ ಶೀರ್ಷಿಕೆ ಪಿ–2236, ಪುಟ ಸಂಖ್ಯೆ.65 ರಲ್ಲಿ ಮೀಸಲಿಟ್ಟಿರುವ ರೂ.50.00 ಲಕ್ಷಗಳ ಅನುದಾನದಿಂದ ಅಂದಾಜು ಮೊತ್ತ ರೂ.24.90 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಜಾಬ್‌ಕೋಡ್ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಅಪರ ಆಯುಕ್ತರು(ಯೋಜನೆ) ರವರ ದಿನಾಂಕ:31–03–2012 ರ ಟಿಪ್ಪಣಿ.

**<u>ನಿರ್ಣಯ:–</u> ದಿನಾಂಕ:31–03–2012 ರ ಮಾನ್ಯ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

4. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/03/ 12–13, ದಿನಾಂಕ:16–04–2012</u>**

ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ವಾರ್ಡ್‌ಗಳಲ್ಲಿರುವ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿಗಳಿಗೆ 2011–12ನೇ ಸಾಲಿನಲ್ಲಿ ತುರ್ತುಕಾಮಗಾರಿಗಳ ಅನುದಾನದಡಿಯಲ್ಲಿ ರೂ.**79.05** ಲಕ್ಷಗಳಿಗೆ ಜಾಬ್ ಕೋಡ್ ನೀಡಲಾಗಿರುತ್ತದೆ. ದಿನಾಂಕ:28–10–2011 ರಂದು ಆಯುಕ್ತರು ಹೊರಡಿಸಿರುವ ಪತ್ರದಂತೆ, ಸದರಿ ಕಾಮಗಾರಿಗಳಿಗೆ ತೋಟಗಾರಿಕೆ ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆಯಲು ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರಿಗೆ ಸದರಿ ಕಡತವನ್ನು ಸಲ್ಲಿಸಲಾಗಿದ್ದು, ಅದರಂತೆ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರು ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆಯಲು ಅನುಮೋದಿಸಿರುವ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳ ವಿವರಗಳನ್ನು ಈ ಕೆಳಕಂಡಂತೆ ನಮೂದಿಸಿ, ಸದರಿ ಕಾಮಗಾರಿಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11–04–2012 ರ ಟಿಪ್ಪಣಿ.

| **ಕ್ರ. ಸಂ.** | **ವಾರ್ಡ್ ಸಂ.** | **ಕಾಮಗಾರಿ ವಿವರ** | **ಅಂದಾಜು ಮೊತ್ತ** | **ಕಾಮಗಾರಿಯ ಸಂಕೇತ** | **ಷರಾ** |
|---|---|---|---|---|---|
| 1. | 174 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.174ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (28 ನಂಬರ್ಸ್, 11 ಪಾರ್ಕ್‌ಗಳಲ್ಲಿ) | 13.70 | 174–12–000010 | **ಟೆಂಡರ್ ಕರೆಯಬೇಕಾಗಿದೆ** |
| 2. | 174 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.174ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (28 ನಂಬರ್ಸ್, 12 ಪಾರ್ಕ್‌ಗಳಲ್ಲಿ) | 13.70 | 174–12–000009 | **ಟೆಂಡರ್ ಕರೆಯಬೇಕಾಗಿದೆ** |

ಮುಂದುವರೆದಿದೆ. . . . .

| | | | | | |
|---|---|---|---|---|---|
| 3. | 175 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.175ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (4 ನಂಬರ್ಸ್, 2 ಪಾರ್ಕ್‌ಗಳಲ್ಲಿ) | 2.00 | 175–12–000018 | **ಟೆಂಡರ್ ಕರೆಯಬೇಕಾಗಿದೆ** |
| 4. | 188 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.188ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (15ನಂಬರ್ಸ್, 6 ಪಾರ್ಕ್‌ಗಳಲ್ಲಿ) | 7.35 | 188–12–000022 | **ಟೆಂಡರ್ ಕರೆಯಬೇಕಾಗಿದೆ** |
| 5. | 193 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.193ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (10 ನಂಬರ್ಸ್, 3 ಪಾರ್ಕ್‌ಗಳಲ್ಲಿ) | 4.90 | 193–12–000020 | **ಟೆಂಡರ್ ಕರೆಯಬೇಕಾಗಿದೆ** |
| 6. | 184 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.184ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (18 ನಂಬರ್ಸ್, 6 ಪಾರ್ಕ್‌ಗಳಲ್ಲಿ) | 8.80 | 184–12–000021 | **ಟೆಂಡರ್ ಕರೆಯಬೇಕಾಗಿದೆ** |
| 7. | 185 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.185ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (4 ನಂಬರ್ಸ್, 2 ಪಾರ್ಕ್‌ಗಳಲ್ಲಿ) | 2.00 | 185–12–000007 | **ಟೆಂಡರ್ ಕರೆಯಬೇಕಾಗಿದೆ** |
| 8. | 195 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.195ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (07 ನಂಬರ್ಸ್, 4 ಪಾರ್ಕ್‌ಗಳಲ್ಲಿ) | 3.45 | 195–12–000008 | **ಟೆಂಡರ್ ಕರೆಯಬೇಕಾಗಿದೆ** |
| 9. | 196 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.196ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (04 ನಂಬರ್ಸ್, 2 ಪಾರ್ಕ್‌ಗಳಲ್ಲಿ) | 2.00 | 196–12–000020 | **ಟೆಂಡರ್ ಕರೆಯಬೇಕಾಗಿದೆ** |
| 10. | 197 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.197ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (8 ನಂಬರ್ಸ್, 4 ಪಾರ್ಕ್‌ಗಳಲ್ಲಿ) | 3.95 | 197–12–000013 | **ಟೆಂಡರ್ ಕರೆಯಬೇಕಾಗಿದೆ** |

**ಮುಂದುವರೆದಿದೆ. . . . .**

| | | | | | |
|---|---|---|---|---|---|
| 11. | 191 | ಬೊಮ್ಮನಹಳ್ಳಿ ವಲಯದ, ವಾರ್ಡ್ ನಂ.191ರಲ್ಲಿ ವಿವಿಧ ಉದ್ಯಾನವನಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (12 ನಂಬರ್ಸ್, 3 ಪಾರ್ಕ್‌ಗಳಲ್ಲಿ) | 5.90 | 191–12–000028 | **ಟೆಂಡರ್ ಕರೆಯಬೇಕಾಗಿದೆ** |
| 12. | | ಬೊಮ್ಮನಹಳ್ಳಿ ವಲಯದ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಿವಿಧ ಬಿ.ಬಿ.ಎಂ.ಪಿ. ಸಹಾಯ ಕೇಂದ್ರಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (05 ನಂಬರ್ಸ್, 05 ಸಹಾಯ ಕೇಂದ್ರಗಳಲ್ಲಿ) | 4.00 | 309–12–000023 | **ಟೆಂಡರ್ ಕರೆಯಬೇಕಾಗಿದೆ** |
| 13. | | ಬೊಮ್ಮನಹಳ್ಳಿ ವಲಯದ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಿವಿಧ ಬಿ.ಬಿ.ಎಂ.ಪಿ. ಸಹಾಯ ಕೇಂದ್ರಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವ ಕಾಮಗಾರಿ (11 ನಂಬರ್ಸ್, 11 ಸಹಾಯ ಕೇಂದ್ರಗಳಲ್ಲಿ) | 7.30 | 309–12–000024 | **ಟೆಂಡರ್ ಕರೆಯಬೇಕಾಗಿದೆ** |
| | | **ಒಟ್ಟು** | **79.05** | | |

**<u>ನಿರ್ಣಯ:–</u>** **ದಿನಾಂಕ: 11–04–2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**5. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/04/ 12–13, ದಿನಾಂಕ:16–04–2012</u>**

ಪದ್ಮನಾಭನಗರ ವಿಧಾನಸಭಾ ಕ್ಷೇತ್ರ, ವಾರ್ಡ್ ಸಂಖ್ಯೆ.165ರ ಗಣೇಶಮಂದಿರ ವಾರ್ಡ್ ಸದಸ್ಯರು ಜಂಟಿ ಆಯುಕ್ತರು(ದಕ್ಷಿಣ)ರವರಿಗೆ ಪತ್ರ ನೀಡಿ ತಮ್ಮ ವಾರ್ಡ್‌ನ ವ್ಯಾಪ್ತಿಯಲ್ಲಿರುವ ಬನಗಿರಿ ಉದ್ಯಾನವನದಲ್ಲಿ ಚೈನ್‌ಲಿಂಕ್ ಫೆನ್ಸಿಂಗ್ ಮತ್ತು ಪಾದಚಾರಿ ಮಾರ್ಗ ನಿರ್ಮಿಸಲಾಗಿದ್ದು, ಸುತ್ತಮುತ್ತಲ ನಿವಾಸಿಗಳ ಕೋರಿಕೆಯಂತೆ ಈ ಉದ್ಯಾನವನದಲ್ಲಿ ಹುಲ್ಲುಹಾಸು ಬೆಳೆಸಿ ವಿವಿಧ ಜಾತಿಯ ಅಲಂಕಾರಿಕ ಗಿಡಗಳನ್ನು ಅಭಿವೃದ್ಧಿಪಡಿಸಲು ತಿಳಿಸಿರುತ್ತಾರೆ. ಈ ಬಗ್ಗೆ ಅಂದಾಜುಪಟ್ಟಿಯನ್ನು ತಯಾರಿಸಿದ್ದು, ರೂ.14.00 ಲಕ್ಷಗಳ ಅನುದಾನಕ್ಕೆ ಜಾಬ್‌ಕೋಡ್ ಸಂಖ್ಯೆ: 165–12–000015 ರಂತೆ ಪಡೆಯಲಾಗಿದ್ದು, ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖಾಂತರ ಕೈಗೆತ್ತಿಕೊಳ್ಳುವಂತೆ ಪಾಲಿಕೆ ಸದಸ್ಯರಾದ ಶ್ರೀ.ಎಲ್.ಗೋವಿಂದರಾಜ್, ರವರು ಮನವಿ ಮಾಡಿಕೊಂಡಿರುತ್ತಾರೆ.

ಈ ಕೆಳಕಂಡ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಅಧೀಕ್ಷಕರು(ದಕ್ಷಿಣ–1)ರವರು ಕಡತವನ್ನು ಸಲ್ಲಿಸಿರುತ್ತಾರೆ.

**ಮುಂದುವರೆದಿದೆ. . . .**

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1. | ವಾರ್ಡ್ ಸಂಖ್ಯೆ.165ರಲ್ಲಿನ ಬನಗಿರಿ ಉದ್ಯಾನವನದಲ್ಲಿ ಹುಲ್ಲುಹಾಸು ಹಾಕುವ ಬಗ್ಗೆ. | 14.00 |
| | ಒಟ್ಟು | 14.00 |

ತೋಟಗಾರಿಕೆ ಅಧೀಕ್ಷಕರು(ದಕ್ಷಿಣ-1)ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ, ಮೇಲ್ಕಂಡ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13-04-2012 ರ ಟಿಪ್ಪಣಿ.

<u>ನಿರ್ಣಯ:-</u> **ದಿನಾಂಕ: 13-04-2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

6. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/05/ 12-13, ದಿನಾಂಕ: 16-04-2012</u>

ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್-35, ಅರಮನೆನಗರದಲ್ಲಿನ ಸದಾಶಿವನಗರ, ಜನತಾ ಬಜಾರ್ ಬಳಿಯ ಉದ್ಯಾನವನದಲ್ಲಿ ನೀರಿನ ವ್ಯವಸ್ಥೆಗಗಿ ಒಂದು ಕೊಳವೆ ಬಾವಿಯನ್ನು ಕೊರೆಯುವ ಕಾಮಗಾರಿಗಾಗಿ ರೂ.4.20 ಲಕ್ಷಗಳ ಅಂದಾಜು ಪ್ರಸ್ತಾವನೆಯನ್ನು ಸಿದ್ದಪಡಿಸಿದ್ದು, ಈ ಕಾಮಗಾರಿಯನ್ನು ಜರೂರಾಗಿ ಕೈಗೆತ್ತಿಕೊಂಡು ನಿರ್ವಹಿಸುವ ಸಲುವಾಗಿ ಜಾಬ್ ಸಂಕೇತ ನೀಡುವ ಬಗ್ಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ KRIDL. ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 12-04-2012 ರ ಟಿಪ್ಪಣಿ.

| Sl. No. | Name of the Work | Estimate Cost Rs.in Lakhs |
|---|---|---|
| 01 | **Drilling of New borewell at sadashivanagara Janatha bazaar park in ward No.35** | 4.20 |

<u>ನಿರ್ಣಯ:-</u> **ದಿನಾಂಕ: 12-04-2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**ಮುಂದುವರೆದಿದೆ. . . .**

**7. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/06/ 12-13, ದಿನಾಂಕ:16-04-2012</u>**

ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ, ಸುಬ್ರಮಣ್ಯನಗರ ಉದ್ಯಾನವನ ಮತ್ತು ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು **ಮೆ॥ಬ್ರಿಗೇಡ್ ಎಂಟರ್‌ಪ್ರೈಸಸ್ ಲಿಮಿಟೆಡ್**ರವರಿಗೆ ವಹಿಸಲು ದಿನಾಂಕ:02-06-2011ರಲ್ಲಿ ವಿಶೇಷ ಆಯುಕ್ತರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ, ಬ್ರಿಗೇಡ್ ಗ್ರೂಪ್‌ರವರು ದಿನಾಂಕ:04-02-2012ರಂದು ಉದ್ಘಾಟನಾ ಸಮಾರಂಭವನ್ನು ಸಹ ನೆರವೇರಿಸಿರುತ್ತಾರೆ. ಆದುದರಿಂದ, ಬ್ರಿಗೇಡ್ ಗ್ರೂಪ್‌ರವರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಈಗಾಗಲೇ ಸಲ್ಲಿಸಿರುವ ಪ್ಲಾನ್‌ನಂತೆ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಬ್ರಿಗೇಡ್ ಎಂಟರ್‌ಪ್ರೈಸಸ್‌ರವರು ಉದ್ಯಾನವನ ಮತ್ತು ಆಟದ ಮೈದಾನದ ಅಭಿವೃದ್ಧಿಗೆ ಕಾಮಗಾರಿಗಳನ್ನು ನಿರ್ವಹಿಸಲು ಒಪ್ಪಿರುತ್ತಾರೆ.

ಈ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬ್ರಿಗೇಡ್ ಎಂಟರ್‌ಪ್ರೈಸಸ್‌ರವರು **ರೂ.4,26,18,561.00** ಗಳಾಗುತ್ತದೆ ಎಂದು ಅಂದಾಜುಪಟ್ಟಿ ಮತ್ತು ವಿವರವಾದ ಯೋಜನಾ ವರದಿಯನ್ನು ಸಲ್ಲಿಸಿರುತ್ತಾರೆ.

ವಾರ್ಡ್ ಸಂಖ್ಯೆ.66ರಲ್ಲಿನ ಸುಬ್ರಮಣ್ಯನಗರದಲ್ಲಿನ ಉದ್ಯಾನವನ ಮತ್ತು ಮಿಲ್ಕ್ ಕಾಲೋನಿಯಲ್ಲಿನ ಮೈದಾನದ ಅಭಿವೃದ್ಧಿ ಕಾಮಗಾರಿಗಳನ್ನು ಬ್ರಿಗೇಡ್ ಗ್ರೂಪ್‌ರವರು ಅವರ ಸ್ವಂತ ವೆಚ್ಚದಲ್ಲಿ ನಿರ್ವಹಿಸಿ, ಬಿ.ಬಿ.ಎಂ.ಪಿ.ಗೆ ಹಸ್ತಾಂತರಿಸಲು ಮುಂದೆ ಬಂದು ಒಡಂಬಡಿಕೆ Memorendum of Agreement ಕರಾರು ಪತ್ರವನ್ನು ಸಲ್ಲಿಸಿರುತ್ತಾರೆ. ಈ ಕರಾರು ಪತ್ರವು ಬ್ರಿಗೇಡ್ ಎಂಟರ್‌ಪ್ರೈಸಸ್‌ನ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆದ ಶ್ರೀ.ಎಂ.ಆರ್.ಜಯಶಂಕರ್ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ನಡುವಿನ ಒಡಂಬಡಿಕೆಯ ಕರಾರು ಪತ್ರವನ್ನು ಯೋಜನಾ ವರದಿಯೊಂದಿಗೆ ಸಲ್ಲಿಸಿರುತ್ತಾರೆ.

ಆದುದರಿಂದ, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ, ಸುಬ್ರಮಣ್ಯನಗರ ಉದ್ಯಾನವನ ಮತ್ತು ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು ಮೆ॥ಬ್ರಿಗೇಡ್ ಎಂಟರ್‌ಪ್ರೈಸಸ್ ಲಿಮಿಟೆಡ್‌ರವರಿಗೆ ವಹಿಸಲು ಮತ್ತು ಈಗಾಗಲೇ ಸಲ್ಲಿಸಿರುವ Drawings ಹಾಗೂ Specification ಗಳಂತೆ, ಸದರಿ ಉದ್ಯಾನವನ ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಿ ಪೂರ್ಣಗೊಂಡ ನಂತರ ಬಿ.ಬಿ.ಎಂ.ಪಿ.ಗೆ ಹಸ್ತಾಂತರಿಸಲು ಒಡಂಬಡಿಕೆ ಕರಾರು ಮಾಡಿಕೊಳ್ಳುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 10-04-2012 ರ ಟಿಪ್ಪಣಿ.

**ನಿರ್ಣಯ:-** **ದಿನಾಂಕ:10-04-2012ರ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**ಮುಂದುವರೆದಿದೆ. . . .**

8. **ವಿಷಯದ ಸಂಖ್ಯೆ:ತೋ/ಸ್ಥಾ/ಸ/07/ 12–13, ದಿನಾಂಕ:17–04–2012**

ಮೆ॥ ಗ್ರೀನ್ ಸಿಟಿ ಮಾರ್ಕೇಟಿಂಗ್ ಬೆಂಗಳೂರುರವರು ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಬುಲೇವಾರ್ಡ್, ಟ್ರಾಫಿಕ್ ಐಲ್ಯಾಂಡ್ ಮತ್ತು ಮೀಡಿಯನ್‌ಗಳನ್ನು ಸ್ವಂತ ಬಂಡವಾಳದ ಮೂಲಕ ದತ್ತಿನ ಆಧಾರದ ಮೇಲೆ ಸುಂದರೀಕರಣಗೊಳಿಸಿ ನಿರ್ವಹಣೆ ಮಾಡಲು ಮೂರು ವರ್ಷಗಳ ಅವಧಿಗೆ ಅನುಮತಿ ನೀಡುವಂತೆ ಕೋರಿ ಜಾಹೀರಾತು ತೆರಿಗೆಯನ್ನು ಭರಿಸಲು ಒಪ್ಪಿ ದಿನಾಂಕ: 05–03–2012 ರಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

1. ಮಹಾತ್ಮಗಾಂಧಿ ರಸ್ತೆಯ ಪೋಲೀಸ್ ವೈರ್‌ಲೆಸ್ ಸ್ಟೇಷನ್ ಕಾಂಪೌಂಡ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗಿನ ಬುಲೇವಾರ್ಡ್.
2. ಕೆ.ಆರ್.ರಸ್ತೆಯ ಟ್ರಾಫಿಕ್ ಐಲ್ಯಾಂಡ್ ಮತ್ತು ಸದರಿ ಪ್ರದೇಶದಿಂದ ನೃಪತುಂಗ ರಸ್ತೆವರೆಗಿನ ಅಂಡರ್‌ಪಾಸ್ ಮೇಲ್ಭಾಗದ ಸಣ್ಣ ಉದ್ಯಾನವನ (Strip Garden)
3. ಬ್ರೀಗೇಡ್ ರಸ್ತೆ ಮತ್ತು ರೆಸಿಡೆನ್ಸಿ ರಸ್ತೆಯ ಜಂಕ್ಷನ್ ಬಳಿಯ ಟ್ರಾಫಿಕ್ ಐಲ್ಯಾಂಡ್.
4. ದೊಮ್ಮಲೂರುನಿಂದ ಹೆಚ್.ಎ.ಎಲ್. ವರೆಗಿನ ಹಳೇ ಏರ್‌ಪೋರ್ಟ್ ರಸ್ತೆಯವರೆಗಿನ ಮೀಡಿಯನ್.
5. ಸ್ವಾಮಿ ವಿವೇಕಾನಂದ ರಸ್ತೆಯ ಕಾಮಧೇನು ಹೋಟೆಲ್ ಕಾಂಪೌಂಡ್ ಬದಿಯಲ್ಲಿನ ಸಣ್ಣ ಉದ್ಯಾನವನ (Strip Garden)
6. ರೇಸ್‌ಕೋರ್ಸ್ ರಸ್ತೆಯ ಜಂಕ್ಷನ್ ಬಳಿಯ ಟ್ರಾಫಿಕ್ ಐಲ್ಯಾಂಡ್.

ಆದರೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ದಿನಾಂಕ:27–02–2012 ರಂದು ನಡೆದ ಸಭೆಯ ನಡವಳಿಯ ವಿಷಯ ಸಂಖ್ಯೆ:ತೆಆಸ್ಥಾಸ/483/11–12 ರಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

''ಪಾಲಿಕೆಯಿಂದ ನಿರ್ಮಿಸಿರುವ ವೃತ್ತ, ರಸ್ತೆ ವಿಭಜಕ, ಉದ್ಯಾನವನ ಮತ್ತು ಟ್ರಾಫಿಕ್ ಐಲ್ಯಂಡ್‌ಗಳನ್ನು ಪಾಲಿಕೆಯಿಂದಲೇ ನಿರ್ವಹಣೆ ಮಾಡಲಾಗುತ್ತಿದ್ದು, ಮೇಲ್ಕಂಡ ಖಾಸಗಿ ಸಂಸ್ಥೆಗಳು ನಿರ್ವಹಣೆ ನೆಪದಲ್ಲಿ ಪಾಲಿಕೆಗೆ ಯಾವುದೇ ಆದಾಯವಿಲ್ಲದೆ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡಿರುವುದು ವ್ಯವಸ್ಥಿತವಾದ ಸಂಚಾಗಿದ್ದು, ಖಾಸಗಿಯವರಿಗೆ ಆದಾಯ ಮಾಡಿಕೊಡುವ ಹುನ್ನಾರವಾಗಿರುತ್ತದೆ. ಅಲ್ಲದೇ ಪಾರದರ್ಶಕ ಕಾಯ್ದೆ ಉಲ್ಲಂಘಿಸಿ ಒಂದು ಸಂಸ್ಥೆಗೆ ಜಾಹೀರಾತಿಗೆ ಅನುಮತಿ ನೀಡಿರುವುದು ಹಾಗೂ ಪಾಲಿಕೆಗೆ ನೆಲಬಾಡಿಗೆ, ಜಾಹೀರಾತು ಶುಲ್ಕ ನಷ್ಟ ಮಾಡಿ ಅನುಮತಿ ನೀಡಿರುವುದು ಕಂಡು ಬಂದಿರುತ್ತದೆ. ಆದುದರಿಂದ, ಪೂರ್ವ ವಲಯದಲ್ಲಿ ವೃತ್ತ, ರಸ್ತೆ ವಿಭಜಕ ಉದ್ಯಾನವನ ಮತ್ತು ಟ್ರಾಫಿಕ್ ಐಲ್ಯಾಂಡ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ದತ್ತಿನ ಆಧಾರದ ಮೇಲೆ ಖಾಸಗಿ ಸಂಸ್ಥೆಗಳಿಗೆ ನಿರ್ವಹಣೆ ಆಧಾರದ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಿರುವ ಆದೇಶವನ್ನು ಪಾಲಿಕೆಯ ಆರ್ಥಿಕ ಹಿತದೃಷ್ಠಿಯಿಂದ ಕೂಡಲೇ ರದ್ದುಪಡಿಸುವುದು ಹಾಗೂ

**ಮುಂದುವರೆದಿದೆ. . . . .**

ಈ ಮೇಲ್ಕಂಡ ಪಟ್ಟಿಯಲ್ಲಿರುವ ಸ್ಥಳಗಳು ಮಾತ್ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಗಮನಕ್ಕೆ ಬಂದಿದ್ದು, ಇದೇ ರೀತಿ ಬೇರೆ ಪ್ರಕರಣಗಳಿದ್ದಲ್ಲಿ ಅವುಗಳನ್ನು ಸಹ ರದ್ದುಗೊಳಿಸಿ ಹೊಸದಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್–ಕಂ–ಹರಾಜುಗಳನ್ನು ಆಹ್ವಾನಿಸಿ, ನಿರ್ವಹಣೆ ಮತ್ತು ಜಾಹೀರಾತು ಪ್ರದರ್ಶನಕ್ಕೆ ನೆಲಬಾಡಿಗೆ, ಜಾರಿಯಲ್ಲಿರುವ ಜಾಹೀರಾತು ಶುಲ್ಕ ಮತ್ತು ಸೇವಾ ತೆರಿಗೆ ಪಾವತಿಸುವಂತೆ ಕ್ರಮಕೈಗೊಳ್ಳುವುದೆಂದು ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ಸ್ಥಳಗಳಿಗೆ ಸಂಬಂಧಪಟ್ಟ ನಿರ್ವಹಣೆಯ ಕಡತವನ್ನು ಸಮಿತಿಯು ಪರಿಶೀಲಿಸಲು ಇಚ್ಛಿಸಿರುವುದರಿಂದ, ಸಂಬಂಧಪಟ್ಟ ಮೂಲ ಕಡತವು ಜಂಟಿ ಆಯುಕ್ತರು (ಜಾಹೀರಾತು) ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ, ತೋಟಗಾರಿಕೆ ಅಧೀಕ್ಷಕರು (ಪೂರ್ವ)ರವರು ಕಳುಹಿಸಿರುವ ಕಡತದೊಂದಿಗೆ ಮುಂದಿನ ಕ್ರಮಕ್ಕಾಗಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 16–04–2012 ರ ಟಿಪ್ಪಣಿ.

**<u>ನಿರ್ಣಯ:–</u>** **ದಿನಾಂಕ:16–04–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಪರಿಶೀಲಿಸಿ, ಗ್ರೀನ್ ಸಿಟಿ ಮಾರ್ಕೆಟಿಂಗ್‌ರವರಿಗೆ ದಿನಾಂಕ:17–10–2011 ರಿಂದ ಕೆಲವು ಮೀಡಿಯನ್ ಮತ್ತು ಸರ್ಕಲ್‌ಗಳನ್ನು ನಿರ್ವಹಣೆ ಮಾಡಲು 11 ತಿಂಗಳ ಅವಧಿಗೆ ಗುತ್ತಿಗೆ ನೀಡಿರುತ್ತಾರೆ. ಈ ಆಧಾರದ ಮೇಲೆ ಸದರಿಯವರು ಸುಮಾರು ಲಕ್ಷಾಂತರ ರೂಪಾಯಿಗಳನ್ನು ನಿರ್ವಹಣೆಗೆ ವೆಚ್ಚ ಮಾಡಿದ್ದು, ನಿರ್ವಹಣೆಯ ಗುತ್ತಿಗೆ ಅವಧಿಯನ್ನು ಮೂವತ್ತಾರು ತಿಂಗಳುಗಳಿಗೆ ಮುಂದುವರೆಸಲು ಸಮಿತಿಯ ಅನುಮತಿ ಕೋರಿರುತ್ತಾರೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:29–03–2012 ರಂದು, ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ, ಸದರಿ ವಿಷಯವನ್ನು ಸಕ್ರಮಗೊಳಿಸಿ ಆದೇಶ ಹೊರಡಿಸಿರುತ್ತಾರೆ. ಆದಪ್ರಯುಕ್ತ, ಪಾಲಿಕೆಯ ಷರತ್ತುಗಳಿಗೆ ಒಳಪಡಿಸಿ ಹಾಗೂ ಪ್ರತಿ 20 ಅಡಿ ಅಂತರದಲ್ಲಿ ಲೋಗೊ ಬಾಕ್ಸ್‌ಗಳಿಗೆ ತಗಲುವ ಜಾಹೀರಾತು ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಂಡು, ಸದರಿ ಸಂಸ್ಥೆಯವರಿಗೆ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡಲು 36 ತಿಂಗಳುಗಳಿಗೆ ದತ್ತು ನೀಡಲು ಸಮಿತಿಯು ತೀರ್ಮಾನಿಸಿತು.**

9. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/08/ 12–13, ದಿನಾಂಕ:17–04–2012</u>

ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ.177ರ ಈ ಕೆಳಕಂಡ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಪಿ–2236 ಪುಟ ಸಂಖ್ಯೆ.65 ರಲ್ಲಿ, 2011–12ನೇ ಸಾಲಿನ ಜಯನಗರದ ಎ, ಬಿ, ಸಿ, ಡಿ, ಉದ್ಯಾನವನಗಳ ಅಭಿವೃದ್ಧಿ ಪಡಿಸುವುದು ಅನುದಾನದಡಿಯಲ್ಲಿ ಜಾಬ್ ಕೋಡ್ ನೀಡಲು ಕೋರಲಾಗಿದೆ.

| Sl. No. | Name of the Work | Estimate Cost Rs.in Lakhs |
|---|---|---|
| 01 | Improvements to ‘D’ Park at J.P.Nagar, IInd Phase in Ward No.177 | 13.75 |

ಮುಂದುವರೆದಿದೆ. . . . .

ಈ ಮೇಲ್ಕಂಡ ಕಾಮಗಾರಿಗೆ ಜಯನಗರದ ಎ, ಬಿ, ಸಿ, ಡಿ, ಉದ್ಯಾನವನಗಳ ಅಭಿವೃದ್ಧಿ ಪಡಿಸುವುದು ಅನುದಾನದ ಶೀರ್ಷಿಕೆ ಪಿ–2236, ಪುಟ ಸಂಖ್ಯೆ.65 ರಲ್ಲಿ ಮೀಸಲಿಟ್ಟಿರುವ ರೂ.50.00 ಲಕ್ಷಗಳ ಅನುದಾನದಿಂದ ಅಂದಾಜು ಮೊತ್ತ ರೂ.13.75 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಜಾಬ್‌ಕೋಡ್ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಅಪರ ಆಯುಕ್ತರು(ಯೋಜನೆ) ರವರ ದಿನಾಂಕ:12–04–2012 ರ ಟಿಪ್ಪಣಿ.

<u>ನಿರ್ಣಯ:–</u> **ದಿನಾಂಕ:12–04–2012 ರ ಮಾನ್ಯ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

10. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/09/ 12–13, ದಿನಾಂಕ:17–04–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಂತಹ ಒಟ್ಟು 8 ವಲಯಗಳಲ್ಲಿ ಅರಣ್ಯೀಕರಣ ಕಾಮಗಾರಿಗಳಿಗೆ ಅನ್ವಯಿಸುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ತೆಅಸ್ಥಾಸ–91/2011–12, ದಿನಾಂಕ:08–08–2011 ರಡಿ ಅನುಮೋದಿಸಿರುವಂತೆ ಹಾಗೂ ತದನಂತರ ವಿಷಯ ಸಂಖ್ಯೆ:165/2011–12ರಲ್ಲಿ ತಿದ್ದುಪಡಿ ಮಾಡಿ ತೀರ್ಮಾನಿಸಿದಂತೆ ಮತ್ತು ಸರ್ಕಾರದ ಆದೇಶ ಸಂಖ್ಯೆ:ನಇ–424–ಎಂಎನ್‌ಯು–2011, ದಿನಾಂಕ: 05–11–2011 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ 2011–12 ರಲ್ಲಿ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಿಸಿದಂತೆ ವಿವಿಧ ಲೆಕ್ಕಶೀರ್ಷಿಕೆಯಡಿ ರೂ.3823.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಅದರಂತೆ ಉತ್ತರ ಮತ್ತು ದಕ್ಷಿಣ ವಿಭಾಗಗಳಲ್ಲಿ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಕಡತದಲ್ಲಿ ಮಂಡಿಸಿದೆ.

ಮುಂದುವರೆದು, ಅರಣ್ಯ ಘಟಕದ ಉತ್ತರ ವಿಭಾಗದ ವ್ಯಾಪ್ತಿಯಲ್ಲಿ ಪೂರ್ವ, ಯಲಹಂಕ, ದಾಸರಹಳ್ಳಿ ಮತ್ತು ಮಹದೇವಪುರ ವಲಯಗಳು ಹಾಗೂ ದಕ್ಷಿಣ ವಿಭಾಗದ ವ್ಯಾಪ್ತಿಯಲ್ಲಿ ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಲಯಗಳಿದ್ದು, ಸದರಿ ವಲಯಗಳಿಗೆ ಬೇಕಾಗುವ ಆಯವ್ಯಯದ ಅನುದಾನವನ್ನು ವಿಂಗಡಿಸಿ ಕ್ರಿಯಾಯೋಜನೆಗಳಲ್ಲಿ ಪ್ರತ್ಯೇಕವಾಗಿ ಐಟಂವಾರು ಅಳವಡಿಸಲಾಗಿದೆ. ಅದರಂತೆ, ಉತ್ತರ ವಿಭಾಗಕ್ಕೆ ಒಟ್ಟು ರೂ.1248.96 ಲಕ್ಷಗಳನ್ನು ನಿಗಧಿಪಡಿಸಿಕೊಳ್ಳಲಾಗಿದೆ ಹಾಗೂ ದಕ್ಷಿಣ ವಿಭಾಗಕ್ಕೆ ಒಟ್ಟು ರೂ.1250.18 ಲಕ್ಷಗಳನ್ನು ನಿಗಧಿಪಡಿಸಿಕೊಂಡು ಕ್ರಿಯಾಯೋಜನೆಗಳನ್ನು ತಯಾರಿಸಲಾಗಿದ್ದು, ಈ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯಲಾಗಿದೆ.

**ಮುಂದುವರೆದಿದೆ. . . . .**

ಆಯವ್ಯಯದಲ್ಲಿ ನಮೂದಿಸಲಾದ ವಿವಿಧ ಕಾರ್ಯಕ್ರಮಗಳ ಬಗ್ಗೆ ವೆಚ್ಚವನ್ನು ಹೊಂದಿಕೊಳ್ಳುವಂತೆ ಕ್ರಿಯಾಯೋಜನೆಯಲ್ಲಿ ನಮೂದಿಸಲಾಗಿದ್ದು, ಆಯವ್ಯಯದಲ್ಲಿ ನಮೂದಿಸಲಾದ ಒಟ್ಟಾರೆ ಅನುದಾನದ ಮೊತ್ತವನ್ನು ಮೀರದಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿರುತ್ತದೆ.

ಮೇಲ್ಕಂಡಂತೆ ಉತ್ತರ ವಿಭಾಗದ ಒಟ್ಟು ಮೊತ್ತ ರೂ.1248.96 ಮತ್ತು ದಕ್ಷಿಣ ವಿಭಾಗದ ಒಟ್ಟು ಮೊತ್ತ ರೂ.1250.18 ಲಕ್ಷಗಳಿಗೆ ಅನುಮೋದನೆ ನೀಡಲು ಕೋರುತ್ತಾ, ಮೇಲ್ಕಂಡ ಕಾಮಗಾರಿಗಳನ್ನು 2011-12ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿದ್ದು, ಈ ಕುರಿತು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 20-03-2012 ರ ಟಿಪ್ಪಣಿ.

**<u>ನಿರ್ಣಯ</u> :- ದಿನಾಂಕ:20-03-2012 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ಸಭೆಯ ನಡವಳಿಕೆಯ ನಿರ್ಣಯವನ್ನು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳ ಬಗ್ಗೆ ಕ್ರಮವಹಿಸಿ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು:-</u>**

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – ಪಶ್ಚಿಮ) ರವರಿಗೆ ಕಳುಹಿಸಿದೆ.
- ತೋಟಗಾರಿಕೆ ಅಧೀಕ್ಷಕರು (ಪೂರ್ವ ಮತ್ತು ದಕ್ಷಿಣ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ.